"ಆಗಲೇ ಹೇಳಿದೆನಲ್ಲಾ ಸಾರ್..."

"ಮತ್ತೊಮ್ಮೆ ಹೇಳಿ, ಒಂದು ಸಣ್ಣ ಪಾಯಿಂಟ್, ಒಂದು ಸಣ್ಣ ಹೆಜ್ಜೆಯನ್ನೂ ಬಿಡಬಾರದು..."

"ಬಿಜು ಹೇಳಿದ, ಬಾಲ್ಕನಿಯ ಮೇಲೆ ಹತ್ತಿ ಬಾಗಿಲ ಪಕ್ಕದ ಕಿಟಕಿಯ ಗಾಜು ಒಡೆದು ಕೈ ಹಾಕಿದರೆ ಬಾಗಿಲ ಚಿಲಕ ತೆರೆಯಬಹುದು ಅಂತ ಹೇಳಿದ್ದ... ನಾನು ಮೇಲೆ ಹತ್ತಿ ಹೋದೆ..."

"ಅಲ್ಲಿ ಕಿಟಕಿಯ ಯಾವ ಗಾಜೂ ಒಡೆದಿರಲಿಲ್ಲ?..."

"ಹೌದು ಸರ್, ಒಡೆಯುವ ಪ್ರಮೇಯವೇ ಬರಲಿಲ್ಲ. ಆ ಕಿಟಕಿ ತೆರೆದೇ ಇತ್ತು."

"ಮುಂದೆ ಹೇಳಿ..."

"ಬಾಲ್ಕನಿಯಿಂದ ಕೆಳಕ್ಕೆ ಇಳಿಯುವಾಗ ಇಡೀ ಹಾಲ್ ಕತ್ತಲಾಗಿತ್ತು. ಎಲ್ಲೋ ಕರೆಂಟ್ ಟ್ರಿಪ್ ಆಗಿರಬೇಕು ಅಂತ ಮೊಬೈಲ್ ಬೆಳಕಿನಲ್ಲಿ ಹೋಗಿ ಮೇನ್ ಸ್ವಿಚ್ ಹಾಕಿದೆ. ಹಾಲಿನ ಎಲ್ಲಾ ದೀಪಗಳೂ ಹೊತ್ತಿಕೊಂಡವು. ಹಾಲ್‌ನಲ್ಲಿ ಏನೂ ಇರಲಿಲ್ಲ..."

"ಬೆಡ್‌ರೂಮಿನ ಬಾಗಿಲು ಹಾಕಿತ್ತು. ಬಾಗಿಲು ತಟ್ಟಿದೆ. ಯಾವ ಉತ್ತರವೂ ಬರಲಿಲ್ಲ ಅಂತ ಬಾಗಿಲುತೆರೆದು ನೋಡಿದೆ. ಲೂಸಿ ಮಲಗಿದ್ದಳು. ನಾಲ್ಕೈದು ಬಾರಿ ಕೂಗಿದರೂ ಏಳಲಿಲ್ಲ ಅಂತ ಮುಟ್ಟಿದೆ. ಮೈ ತಣ್ಣಗಾಗಿತ್ತು! ಆಮೇಲೆ ಬಿಜುಗೆ ಮತ್ತು ಪೊಲೀಸರಿಗೆ ತಿಳಿಸಿದೆ. ಇಷ್ಟೇ ಸರ್..."

ಸೀತಾರಾಮಯ್ಯ ರುದ್ರೇಶ್ ಕಡೆ ನೋಡಿದ. ಏನಾದರೂ ನಿಮ್ಮ ಥಿಯರಿಗೆ ಹೊಂದಿಕೊಳ್ಳುವಂಥ ವಿಷಯ ಸಿಕ್ಕಿತಾ ಅನ್ನುವ ಭಾವನೆಯಿತ್ತು ಅವನ ನೋಟದಲ್ಲಿ.

ರುದ್ರೇಶನ ಮುಖದಲ್ಲಿ ಯಾವುದೇ ಭಾವನೆಯಿರಲಿಲ್ಲ.

"ನಾನು ಹೊರಡುತ್ತೇನೆ ಸರ್. ಆಫೀಸಿಗೆ ಲೇಟ್ ಆಗುತ್ತದೆ."

ಬೇಸರಹೊತ್ತ ಮುಖದಿಂದಲೇ ಒಪ್ಪಿಗೆ ನೀಡಿದ ರುದ್ರೇಶ್.

ಬಾಗಿಲ ತನಕ ಹೋದ ಜೀವನ್ ವಾಪಸ್ ಬಂದ.

"ಸರ್ ಒಂದು ವಿಷಯ ಹೇಳಲು ಮರೆತಿದ್ದೆ. ಅದು ನನಗೂ ಆಶ್ಚರ್ಯ ತಂದಿತ್ತು."

ಇಬ್ಬರ ಕಿವಿಗಳೂ ಚುರುಕಾದವು.

"ನಾನು ಲೂಸಿಯನ್ನು ಎಬ್ಬಿಸುವ ಪ್ರಯತ್ನ ಮಾಡುತ್ತಿರುವಾಗ, ಒಮ್ಮೆಲೇ ತಂಪು ಗಾಳಿ ಬಡಿದಂತಾಯಿತು. ನೋಡಿದರೆ, ಎ.ಸಿ. ಆನ್ ಆಗಿತ್ತು. ಒಂದೆರಡು ನಿಮಿಷಗಳಲ್ಲಿಯೇ ತಡೆಯಲಾರದಷ್ಟು ಥಂಡಿಯಾಗತೊಡಗಿತು. ರಿಮೋಟ್ ಎಲ್ಲಿದೆ ಅಂತ ಹುಡುಕಿ, ಎ.ಸಿ. ಆರಿಸಿ ಆಮೇಲೆ ಲೂಸಿಯನ್ನು ಎಬ್ಬಿಸಲು ಪ್ರಯತ್ನಿಸಿದೆ. ಈ ಚಳಿಗಾಲದಲ್ಲಿ ಎ.ಸಿ. ಹಾಕಿಕೊಂಡು ಯಾರು ಮಲಗುತ್ತಾರೆ ಸಾರ್... ಅದೇ ಆಶ್ಚರ್ಯ."

ಅವನ ಮಾತುಗಳನ್ನು ಕೇವಲ ಕೇಳಿಸಿಕೊಂಡು ಕಳಿಸಿಕೊಟ್ಟ ರುದ್ರೇಶ್. ಸೀತಾರಾಮಯ್ಯ ಹೊರಡುವ ತಯಾರಿ ನಡೆಸಿದ್ದ.

"ಈ ಚಳಿಯಲ್ಲಿ ಎ.ಸಿ. ಯಾರು ಹಾಕಿಕೊಳ್ಳುತ್ತಾರೆ ಸಾರ್... ಹಿಮಾಲಯದಲ್ಲಿ ಮಲಗಿದ ಹಾಗೆ ಆಗುತ್ತೆ ಅಷ್ಟೇ..." ಎಂದ ನಗುತ್ತಾ.

ಸಾವಿರ ಬಲ್ಬ್‌ಗಳು ಒಮ್ಮೆಲೇ ರುದ್ರೇಶ್‌ನ ತಲೆಯಲ್ಲಿ ಮಿಂಚಿದವು!!

ಒಂದು ಕ್ಷಣ ಅಲ್ಲಿಯೇ ಇದ್ದ ಸೋಫಾದಲ್ಲಿ ಕುಳಿತ. ತಲೆಯಲಿ ಆಲೋಚನೆಗಳು ಮೂಡತೊಡಗಿದವು. ದೂರ ದೂರವಿದ್ದ ಕೊಂಡಿಗಳು ಹತ್ತಿರ ಬಂದು ಕೂಡಿಕೊಳ್ಳತೊಡಗಿದವು.

ತನ್ನ ಜೇಬಿನಲ್ಲಿದ್ದ ಪ್ಯಾಡ್ ತೆರೆದು ಏನೇನೋ ಗೀಚಿಕೊಂಡ. ಬಾಲ್ಕನಿಗೂ ಕೆಳಕ್ಕೂ ಅನೇಕ ಬಾರಿ ಓಡಾಡಿದ.

"ನಡೆಯಿರಿ ಸೀತಾರಾಮಯ್ಯ... ಹೋಗೋಣ" ಅವನ ಮಾತುಗಳಲ್ಲಿ ಏನೋ ಸಾಧಿಸಿದ ಬೆಳಕು